**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 2/2024 DW – 1**

**ದಿನಾಂಕಃ 08.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಸೌಮ್ಯ |
| ಗಂಡನ ಹೆಸರು | : | ರಾಜು |
| ವಯಸ್ಸು | : | **47** ವರ್ಷ |
| ಉದ್ಯೋಗ | : | ಟೀ ಅಂಗಡಿ ವ್ಯಾಪಾರ |
| ವಾಸ ಸ್ಥಳ | : | ಹುಣಸೂರು |

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀಮತಿ ಸಿ. ಬಿ. ಎ. ವಕೀಲರಿಂದಃ-

ಆರೋಪಿ 5 ವರ್ಷದಿಂದ ಪರಿಚಯ. ನಾನು ರೂ. 60 ಸಾವಿರ ಹಣ ಜನವರಿ 2023 ರಲ್ಲಿ ಪಡೆದಿದ್ದು ಈ ಹಣವನ್ನು 3- 4 ತಿಂಗಳ ಒಳಗೆ ತೀರಿಸಿರುತ್ತೇನೆ. ದೂರಿನಲ್ಲಿ ಹೇಳಿರುವಂತೆ ರೂ. 4 ವರೆ ಲಕ್ಷ ಹಣ ಅವರಿಂದ ಪಡೆದಿಲ್ಲ. ರೂ. 60 ಸಾವಿರ ಹಣ ಪಡೆದಾಗ ನಿ ಪಿ 1 ಸಹಿ ಹಾಕಿದ ಖಾಲಿ ಚೆಕ್ ಅನ್ನು ಭದ್ರತೆಗೆ ಕೊಟ್ಟಿದ್ದೆ ಅದನ್ನು ದುರುಪಯೋಗಿಪಡಿಸಿಕೊಂಡಿದ್ದಾರೆ. ಅವರಿಂದ ಚೆಕ್ ವಾಪಸ್ ಕೇಳಿರುತ್ತೇನೆ ಕೊಟ್ಟಿರುವುದಿಲ್ಲ ನನ್ನ ಮನೆಗೆ ಬೆ. 08.00 ಗಂಟೆ ಸುಮಾರಿಗೆ ಬರುತ್ತಿದ್ದು ನನಗೆ ನನ್ನ ಕುಟುಂಬವಿದ್ದು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಅಸಭ್ಯವಾಗಿ ನಡೆದುಕೊಂಡಿರುತ್ತಾನೆ. ಮಾರ್ಯಾದೆ ಪ್ರಶ್ನೆಗಾಗಿ ಈ ರೀತಿ ನಡೆದುಕೊಂಡರು ಪೊಲೀಸರಿಗೆ ದೂರು ಕೊಟ್ಟಿರುವುದಿಲ್ಲ. ನಿ ಡಿ 1 ರಿಂದ 3 ಫೋಟೋಗಳನ್ನು ಆತ ಮನೆಗೆ ಬಂದಾಗ ಅಸಭ್ಯವಾಗಿ ನಡೆದುಕೊಳ್ಳುವುದನ್ನು ತೆಗೆದಿರುತ್ತೇನೆ. ಚೆಕ್ ಅನ್ನು ವಾಪಸ್ ಕೇಳಿದರು ಕೊಟ್ಟಿಲ್ಲ. ನಾನು ಅವರ ನೋಟೀಸ್‌ಗೆ ಉತ್ತರ ಕೊಟ್ಟಿದ್ದೇನೆ ಆದ್ದರಿಂದ ದೂರನ್ನು ವಜಾ ಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ- ಫಿರ್ಯಾದುದಾರರ ಪರ ವಕೀಲರು ಸಮಯ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ